2018 VI 21 | 0230 | Seat No. : ☐☐☐☐☐

Time : 2½ Hours

KANNADA (T.L.) (New)

Subject Code

| S | 1 | 3 | 6 |
|---|---|---|---|

Total No. of Questions : 10 (Printed Pages : 7) Maximum Marks : 80

*ಸೂಚನೆಗಳು : i) ಪ್ರತಿಯೊಂದು ಪ್ರಶ್ನೆಯನ್ನು **ಒಂದು ಹೊಸ** ಪುಟದ ಮೇಲೆ ಬರೆಯಿರಿ.*
*ii) ಪ್ರತಿ ಪ್ರಶ್ನೆಯ ಸಂಖ್ಯೆ ಮತ್ತು ಉಪಸಂಖ್ಯೆಯನ್ನು ಸ್ಪಷ್ಟವಾಗಿ ಬರೆಯಿರಿ.*
*iii) ಎಲ್ಲಾ ಪ್ರಶ್ನೆಗಳನ್ನು ಬಿಡಿಸುವುದು **ಆವಶ್ಯವಾಗಿದೆ.***

1. ಅ) ಕೆಳಗೆ ಕೊಟ್ಟಿರುವ ಪರ್ಯಾಯ ವಾಕ್ಯಗಳಿಂದ ಸರಿಯಾದ **ಒಂದನ್ನು** ಆರಿಸಿ ವಾಕ್ಯ ಪೂರ್ಣ ಮಾಡಿ ಬರೆಯಿರಿ. **[2]**

1) ರಮೇಶನ ನೆರೆಮನೆಯವರು ಮನೆಯ ಮುಂದೆ ಸೇರಿದ್ದರು ಏಕೆಂದರೆ
   i) ಇವನ ಮನೆಯಲ್ಲಿ ಕಳ್ಳತನವಾಗಿತ್ತು
   ii) ಇನ್‌ಕಮ್ ಟ್ಯಾಕ್ಸ್ ಅಧಿಕಾರಿಗಳು ದಾಳಿ ನಡೆಸಿದ್ದರು
   iii) ಗಂಡ ಹೆಂಡತಿಯರ ಜಗಳ ತೀರ ವಿಕೋಪಕ್ಕೆ ತಿರುಗಿತ್ತು

2) ವಿಶ್ವೇಶ್ವರಯ್ಯನವರು ಜೋಗ ನೋಡಲು ಬಂದಾಗ ಎಂತಹ ದೊಡ್ಡ ನಷ್ಟ ನಮ್ಮ ದೇಶಕ್ಕೆ ಎಂದರು ಏಕೆಂದರೆ
   i) ಸರಕಾರದ ಸೂಕ್ತ ಸಹಾಯ ಸಿಗುತ್ತಿರಲಿಲ್ಲ
   ii) ಜೋಗ ನೋಡಲು ಸರಿಯಾದ ರಸ್ತೆಗಳು ಇರಲಿಲ್ಲ
   iii) ನೀರಿನ ಶಕ್ತಿ ವ್ಯರ್ಥವಾಗುತ್ತದಲ್ಲ ಎಂಬುದು ಅವರ ಅಭಿಪ್ರಾಯವಾಗಿತ್ತು

ಬ) ಕೆಳಗಿನ ಬೇಕಾದ **ನಾಲ್ಕು** ಮಾತುಗಳನ್ನು ಯಾರು– ಯಾರಿಗೆ ಹೇಳಿದರು ಬರೆಯಿರಿ : **[4]**

i) ''ಒಂದು ವೇಳೆ ಗೂಡು ಕತ್ತರಿಸಿದರೆ ಅದನ್ನು ಕೊಂಡುಕೊಳ್ಳುವುದಿಲ್ಲ''

ii) ''ಏನು ನಮ್ಮ ಕೈತೋಟದಲ್ಲಿ ಬಂಗಾರದ ಗಣಿ ಇದೆಯೆ ?''

iii) ''ಬನ್ನಿ ಅಣ್ಣಾ! ಬಡವರ ಮನೆಗೆ ಭಾಗ್ಯಲಕ್ಷ್ಮೀ ಬಂದಂತಾಯಿತು.''

iv) ''ಹೋಗಿ ಅಳಿಯಂದಿರೇ, ನನಗೇನು ಕೋಪವಿಲ್ಲ ಮಲಗಿಕೊಳ್ಳಿ''

v) ''ಸರ್, ಬ್ಯಾಂಕಿನಲ್ಲಿ ಹಣ ಜಮಾ ಮಾಡುವದು ಹೇಗೆ ?''

ಕ) ಕೆಳಗಿನ ಬೇಕಾದ **ನಾಲ್ಕು** ಪ್ರಶ್ನೆಗಳಿಗೆ **ಒಂದೊಂದೇ** ವಾಕ್ಯದಲ್ಲಿ ಉತ್ತರ ಬರೆಯಿರಿ : **[4]**

i) ಜನಸಂಖ್ಯಾ ಸ್ಫೋಟ ಎಂದರೇನು ?

ii) ಅಶೋಕನು ಯಾರ ಮಗನಾಗಿದ್ದನು ?

iii) 'ಭಾರತದ ಉಕ್ಕಿನ ಮನುಷ್ಯ' ಎಂದು ಯಾರನ್ನು ಕರೆಯುವರು ?

iv) ಕರ್ನಾಟಕ ಅಂದ ಕೂಡಲೇ ನಮ್ಮ ನೆನಪಿಗೆ ಬರುವದು ಯಾವ ಜಲಪಾತ ?

v) 'ಎ' ಮತ್ತು 'ಸಿ' ಜೀವಸತ್ವವುಳ್ಳ ಪದಾರ್ಥಗಳಾವುವು ?

2. ಅ) ಕಂಸದಲ್ಲಿ ಕೊಟ್ಟಿರುವ ಶಬ್ದಗಳಲ್ಲಿ ಯೋಗ್ಯವಾದ **ಒಂದನ್ನು** ಆರಿಸಿ ಕೆಳಗಿನ ಬಿಟ್ಟ ಸ್ಥಳಗಳನ್ನು ತುಂಬಿರಿ : **[2]**

i) _______ ಭಾರತದ ರಕ್ಷಣಾ ದಳದ ಅತ್ಯುಚ್ಚ ಮಟ್ಟದ ಗೌರವವಾಗಿದೆ.
(ನೊಬೆಲ್ ಪಾರಿತೋಷಕ, ಪರಮವೀರ ಚಕ್ರ, ಅರ್ಜುನ ಪ್ರಶಸ್ತಿ)

ii) ಖರೀದಿ ಮಾಡಿದ ವ್ಯಾಪಾರಸ್ಥರು ರೇಷ್ಮೆ ಗೂಡುಗಳನ್ನು ತಕ್ಷಣ ________ ನೀರಿನಲ್ಲಿ ಹಾಕುತ್ತಾರೆ.
(ಬಿಸಿ, ತಂಪಾದ, ಕಾದು ಆರಿದ)

iii) ಎಮ್ಮೆ ಕರುವನ್ನು _______ ಕೆಳಗೆ ಕಟ್ಟಿದ್ದರು.
(ಕೊಟ್ಟಿಗೆ, ಮನೆಯ ಹಿಂಭಾಗದ, ಗಗ್ಗರ ಕಟ್ಟೆಯ)

iv) ಎಲ್ಲ ಸತ್ವಗಳಿಂದ ಕೂಡಿದ ಆಹಾರಕ್ಕೆ _______ ಆಹಾರ ಎನ್ನುತ್ತಾರೆ.
(ಉತ್ತಮ, ಸಮತೋಲ, ಸಂರಕ್ಷಣಾ)

ಬ) ಕೆಳಗಿನ ಬೇಕಾದ **ಮೂರು** ಪ್ರಶ್ನೆಗಳಿಗೆ **ಮೂರು-ನಾಲ್ಕು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : **[9]**

i) ವಕೀಲಿ ವೃತ್ತಿಯಲ್ಲಿ ಪಟೇಲರು ವಿಚಲಿತರಾಗದ ಪ್ರಸಂಗವನ್ನು ವಿವರಿಸಿರಿ.

ii) ಸರಕಾರವು ಜೋಗ ಜಲಪಾತದ ಚೆಲುವನ್ನು ಹೆಚ್ಚಿಸಲು ಯಾವ ಕ್ರಮ ಕೈಗೊಂಡಿದೆ ?

iii) ರಾಧಾ ಏಕೆ ಪಶ್ಚಾತ್ತಾಪ ಪಟ್ಟಳು ?

iv) ಅರಣ್ಯ ಸಂಪತ್ತು ಯಾವ ಯಾವ ಕಾರಣಗಳಿಂದ ನಾಶವಾಗುತ್ತದೆ ?

ಕ) ಕೆಳಗಿನ ಬೇಕಾದ **ಒಂದು** ಪ್ರಶ್ನೆಗೆ **ನಾಲ್ಕು-ಐದು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : **[4]**

i) ವಿರೂಪಾಕ್ಷ ದೇವಾಲಯದ ರೀತಿ ಕುರಿತು ಬರೆಯಿರಿ.

ii) ಓಝೋನ್ ಪದರದ ನಾಶದಿಂದ ಉಂಟಾಗುವ ದುಷ್ಪರಿಣಾಮಗಳನ್ನು ವಿವರಿಸಿರಿ.

3. ಅ) ಕೆಳಗಿನ ಶಬ್ದಗಳ ಅರ್ಥ ಬರೆಯಿರಿ : **[2]**

i) ಪ್ರಚಂಡ

ii) ಅಪರೂಪ

iii) ಕಳಕಂಠ

iv) ಪೋಟೋ.

ಬ) ಕೆಳಗಿನ ಶಬ್ದಗಳನ್ನು ಉಪಯೋಗಿಸಿ ಸ್ವಂತ ವಾಕ್ಯ ರಚಿಸಿ ಬರೆಯಿರಿ : **[2]**

i) ಸೋದರ

ii) ಉತ್ಸಾಹ.

ಕ) ಕೆಳಗಿನ ವಾಕ್ಯಗಳಲ್ಲಿನ ವಿಶೇಷಣ ಗುರುತಿಸಿ ಬರೆಯಿರಿ : **[2]**

i) ಮಾವು ಸವಿಯಾದ ಹಣ್ಣಾಗಿದೆ.

ii) ಮಳೆಗಾಲದಲ್ಲಿ ಹಳ್ಳಗಳು ರಭಸದಿಂದ ಹರಿಯುತ್ತವೆ.

iii) ತಾಯಿಯು ಮಕ್ಕಳನ್ನು ಪ್ರೀತಿಯಿಂದ ನೋಡುತ್ತಾಳೆ.

iv) ತೋಟದ ಯಜಮಾನನು ನಿಷ್ಠುರ ಸ್ವಭಾವದವನು.

ಡ) ಕೆಳಗಿನ ಶಬ್ದಗಳ ಸಂಧಿ ವಿಗ್ರಹಿಸಿ ಬರೆಯಿರಿ : **[2]**

i) ಗಿಡವನ್ನು

ii) ಹುಲಿದೊಗಲು

iii) ಚಿತ್ತಾಕರ್ಷಕ

iv) ವನೌಷಧಿ.

4. ಅ) ಕೆಳಗಿನ ಬೇಕಾದ **ನಾಲ್ಕು** ಪ್ರಶ್ನೆಗಳಿಗೆ **ಒಂದೊಂದೇ** ವಾಕ್ಯದಲ್ಲಿ ಉತ್ತರ ಬರೆಯಿರಿ : **[4]**

1) ಮನವನ್ನು ತಣಿಸುವ ಸುಧೆ ಯಾವುದು ?

2) ಯಾವುದರಲ್ಲಿ ತಾಯಿ ಧೇನು ಆಗಿದ್ದಾಳೆ ?

3) ಮಾವಿನಗೊಲ್ಲೆ ಕವಿತೆಯನ್ನು ಬರೆದವರಾರು ?

4) ಶಿಲ್ಪಕಲೆಯ ಆಗರ ಯಾವುದು ?

5) ರಂಗನು ಮುರುಳಿಯನ್ನು ಯಾವಾಗ ನುಡಿಸುವನು ?

ಬ) ಕೆಳಗಿನ ಬೇಕಾದ **ಎರಡು** ಪ್ರಶ್ನೆಗಳಿಗೆ **ಎರಡು-ಮೂರು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : **[4]**

i) ಬೂದಿ ಕೆಸರಿನಲ್ಲಿ ಕೂಡಿದಾಗ ಏನಾಗುತ್ತದೆ ?

ii) ರೈತನು ಯಾವ ರೀತಿ ಸುಖವಾಗಿ ಇರುತ್ತಾನೆ ?

iii) ಬಿದಿರಿನಿಂದ ಆಗುವ ಉಪಯೋಗಗಳನ್ನು ಬರೆಯಿರಿ.

5. ಅ) ಕೆಳಗಿನ ಶಬ್ದಗಳ ವಚನ ಬದಲಿಸಿ ಬರೆಯಿರಿ : **[2]**

i) ಗಾಯಕ

ii) ಮನುಷ್ಯರು

iii) ಸಾಹಿತಿ

iv) ನಾವು.

ಬ) ಕೆಳಗಿನ ಶಬ್ದಗಳ ಲಿಂಗ ಬದಲಿಸಿ ಬರೆಯಿರಿ : **[2]**

i) ಸೇವಕಿ

ii) ಬುದ್ಧಿವಂತ

iii) ಒಬ್ಬಳು

iv) ಪುರುಷ.

ಕ) ಕೆಳಗಿನ ಶಬ್ದಗಳ ವಿರುದ್ಧಾರ್ಥಕ ಶಬ್ದಗಳನ್ನು ಬರೆಯಿರಿ : **[2]**

i) ಜಾಣ

ii) ಪ್ರತ್ಯಕ್ಷ

iii) ಒಳಿತು

iv) ಹೊಗಳು

ಡ) ಕೆಳಗಿನ ಬೇಕಾದ **ಎರಡು** ಗಾದೆ ಮಾತುಗಳ ಸರಳ ಅರ್ಥ ಬರೆಯಿರಿ : **[2]**

1) ಜನಸೇವೆಯೇ ಜನಾರ್ಧನನ ಸೇವೆ.

2) ವಿದ್ಯೆ ಇಲ್ಲದವನ ಬಾಳು ಹದ್ದಿಗಿಂತ ಕಡೆ.

3) ತುಂಬಿದ ಕೊಡ ತುಳುಕುವುದಿಲ್ಲ.

ಇ) ಕೆಳಗಿನ ಶಬ್ದಗಳ ಸಮಾನಾರ್ಥಕ ಶಬ್ದಗಳನ್ನು ಬರೆಯಿರಿ : **[2]**

i) ದಿನ

ii) ಪುತ್ರ

iii) ಕುದುರೆ

iv) ರಾಜ

6. ಕೆಳಗಿನವುಗಳಲ್ಲಿ **ಒಂದು** ವಿಷಯದ ಕುರಿತು **ಹದಿನೈದು – ಇಪ್ಪತ್ತು** ವಾಕ್ಯಗಳಲ್ಲಿ ನಿಬಂಧ ಬರೆಯಿರಿ : **[6]**

1) ನಾನು ಅಗ್ನಿಶಾಮಕನಾದರೆ . . .

2) ಕೊಡೆಯ ಆತ್ಮಕಥೆ

3) ವರ್ತಮಾನ ಪತ್ರಿಕೆಯಿಂದಾಗುವ ಲಾಭಗಳು

4) ನಮ್ಮೂರ ಜಾತ್ರೆ

5) ಸುಭಾಷ್ ಚಂದ್ರ ಬೋಸ್.

7. ಕೆಳಗಿನ ವಾಕ್ಯಾಂಶಗಳ ಸಹಾಯದಿಂದ **ಒಂದು** ಸ್ವತಂತ್ರವಾದ ಕಥೆಯನ್ನು ರಚಿಸಿ ಬರೆಯಿರಿ ಮತ್ತು ಅದಕ್ಕೆ ಯೋಗ್ಯವಾದ ತಲೆಬರಹ ನೀಡಿರಿ. **[6]**

ಒಂದು ಕಾಡಿನಲ್ಲಿ ನರಿ ಮತ್ತು ಕೊಕ್ಕರೆ . . . . . . . . . . ಇಬ್ಬರು ಗೆಳೆಯರು . . . . . . . . . . ಕೊಕ್ಕರೆಗೆ ಊಟಕ್ಕೆ ಆಮಂತ್ರಣ . . . . . . . . . . ಅಗಲವಾದ ತಟ್ಟೆಯಲ್ಲಿ ಪಾಯಸ . . . . . . . . . . ಕೊಕ್ಕರೆಗೆ ತಿನ್ನಲು ಆಗಲಿಲ್ಲ. . . . . . . . . ನರಿ ಬಾಯಿ ಚಪ್ಪರಿಸಿತು . . . . . . . . . . ಕೊಕ್ಕರೆಯ ಸಪ್ಪೆ ಮುಖ . . . . . . . . . . ಕೆಲವು ದಿನಗಳ ನಂತರ . . . . . . . . . . ನರಿಗೆ ಊಟಕ್ಕೆ ಆಮಂತ್ರಣ . . . . . . . . . . ಚಿಕ್ಕ ಬಾಯಿಯುಳ್ಳ ಹೂಜಿಯ ಆಕಾರದ ಪಾತ್ರೆಯಲ್ಲಿ ಪಾಯಸ . . . . . . . . . . ನರಿಗೆ ತಿನ್ನಲು ಸಾಧ್ಯವಾಗಲಿಲ್ಲ. . . . . . . . . . ನರಿ ಮನೆಗೆ ಹಿಂದಿರುಗಿತು.

8. ಕೆಳಗಿನ ಗದ್ಯ ಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ **ಒಂದೇ** ವಾಕ್ಯದಲ್ಲಿ ಉತ್ತರ ಬರೆಯಿರಿ :

ಮಕ್ಕಳ ಜಗತ್ತಿನ ಮಾಂತ್ರಿಕ ಶಿವರಾಮ ಕಾರಂತರ ಮಕ್ಕಳಿಗಾಗಿ ಶ್ರಮಿಸಿದರು. ಅವರು ಮಕ್ಕಳಿಗಾಗಿ ಬರೆದ ಬಾಲ ಪ್ರಪಂಚ, ವಿಜ್ಞಾನ ಪ್ರಪಂಚಗಳು, ಅದ್ಭುತ ಜಗತ್ತು, ವಿಶ್ವಕೋಶಗಳು, ಮಗನ ಮದುವೆ, ಢಂ ಢಂ ಡೋಲು, ಹುಲಿರಾಯ ಮುಂತಾದ ಕೃತಿಗಳು ಮಕ್ಕಳ ಓದುವ ಅಭಿರುಚಿಯನ್ನು ಹೆಚ್ಚಿಸಿವೆ. ಕಾರಂತರು 1934ರಲ್ಲಿ ಪುತ್ತೂರಿನಲ್ಲಿ ಬಾಲವನ ಎಂಬ ಶಾಲೆಯನ್ನು ಆರಂಭಿಸಿದರು. ಶಾಲೆಯಲ್ಲಿ ನಾಟಕದ ಮೂಲಕವೇ

ಪಾಠ ಕಲಿಸುವ ಪ್ರಯತ್ನವನ್ನು ಕಾರಂತರು ನಡೆಸಿದ್ದರು. ಕಡಲು, ನದಿ, ಬೆಟ್ಟ-ಗುಡ್ಡ ಮುಂತಾದ ನಾಟಕಗಳನ್ನು ಮಕ್ಕಳಿಗಾಗಿ ಬರೆದಿದ್ದಾರೆ. ಪರಿಸರ ಸಾಹಿತ್ಯಕ್ಕೆ ಸಂಬಂಧಿಸಿದಂತೆ 16 ಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿಯ ಏಳು ಕೃತಿಗಳು ಇತರ ಭಾಷೆಗೆ ಅನುವಾದಗೊಂಡಿವೆ. 1978ರಲ್ಲಿ ತಮ್ಮ 'ಮೂಕಜ್ಜಿಯ ಕನಸುಗಳು' ಕಾದಂಬರಿಗಾಗಿ ಕಾರಂತರು ಜ್ಞಾನಪೀಠ ಪ್ರಶಸ್ತಿಯನ್ನು ಪಡೆದರು. ಹಲವಾರು ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್, ಪಂಪ ಪ್ರಶಸ್ತಿ, ರಾಜ್ಯ ಕೇಂದ್ರ ಸಾಹಿತ್ಯ ಅಕಾಡಮಿಗಳ ಪ್ರಶಸ್ತಿ ಹಾಗೂ ಗೌರವಗಳು ಕೂಡ ಅವರನ್ನು ಅರಸಿಕೊಂಡು ಬಂದಿದೆ.

ಪ್ರಶ್ನೆಗಳು :

i) ಶಿವರಾಮ ಕಾರಂತರು ಮಕ್ಕಳಿಗಾಗಿ ಬರೆದ ಕೃತಿಗಳಾವುವು ? **[1]**

ii) ಕಾರಂತರು ಬಾಲವನ ಎಷ್ಟರಲ್ಲಿ ಆರಂಭಿಸಿದರು ? **[1]**

iii) ಮಕ್ಕಳಿಗಾಗಿ ಕಾರಂತರು ಬರೆದ ನಾಟಕಗಳಾವುವು ? **[1]**

iv) ಇವರ ಎಷ್ಟು ಕೃತಿಗಳು ಬೇರೆ ಭಾಷೆಗೆ ಅನುವಾದಗೊಂಡಿವೆ ? **[1]**

v) ಕಾರಂತರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿತು ? **[1]**

9. ಪತ್ರ : **[6]**

ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ವಸತಿ ನಿಲಯವನ್ನು ಕಟ್ಟಿಸಿಕೊಡುವಂತೆ ಶಿಕ್ಷಣ ಮಂತ್ರಿ, ಪಣಜಿ-ಗೋವಾ ಇವರಿಗೆ ಒಂದು ಮನವಿ ಪತ್ರವನ್ನು ಹೌಸಿಂಗ್ ಬೋರ್ಡ್, ಬಿಚೋಲಿಯ ನಾಗರಿಕರು ಬರೆಯುವ ಮಾದರಿಯಲ್ಲಿ ಒಂದು ಪತ್ರ ಬರೆಯಿರಿ.

**ಅಥವಾ**

ರಮಣ/ರಾಧಾ ಹಿರೇಮಠ, ಜಲಧಾರಾ ಅಪಾರ್ಟ್‌ಮೆಂಟ್, ಮನೆಯ ಕ್ರಮಾಂಕ 16, ಗಾಯತ್ರಿನಗರ-ಮಾಪುಸಾದಲ್ಲಿ ವಾಸಿಸುವ/ಳು. ತನ್ನ ಗೆಳೆಯ/ಗೆಳತಿಗೆ ಓಟದ ಸ್ಪರ್ಧೆಯಲ್ಲಿ ಚಿನ್ನದ ಪದಕ ಗಳಿಸಿದಾಗ ಅಭಿನಂದನೆ ಸಲ್ಲಿಸಿ ಬರೆಯುವ ಮಾದರಿಯಲ್ಲಿ ಪತ್ರ ಬರೆಯಿರಿ.

10. ಕೆಳಗಿನ **ಎರಡು** ಕವಿತೆಗಳ ಸರಳ ಅರ್ಥ ಬರೆಯಿರಿ :

ಅ) ಸಂತೆಗೆ ಹೋಗಿ ಶ್ರಮ ಪಡಿಸುವುದಿಲ್ಲ **[3]**
ಸಂತೆಯೊಳಗೆ ಇಟ್ಟು ಮಾರುವುದಲ್ಲ
ಸಂತ ಭಕ್ತರ ನಾಲಗೆ ಸವಿಗೊಂಬ
ಕಾಂತ ಪುರಂದರ ವಿಠಲ ನಾಮವೆಂಬ

ಬ) ನಾಡ ಮಕ್ಕಳೆ ಕೂಡವ ಬನ್ನಿ **[3]**
ಆಡುತ ಹಾಡುತ ನಲಿಯುತಲಿ
ದುಡಿಮೆಯ ದೀಕ್ಷೆಯ ಪಡೆಯುವ ಬನ್ನಿ
ನಾಡ ಗುಡಿಯನು ಮೆರೆಯುತಲಿ

---